ಇಂದು ದಿ:**15-06-2026** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್.ಎಂ.ಕೆ ವಕೀಲರಿಂದ ಪ್ರತಿವಾದಿಗಳ ಪರಃ**

ಸ್ವರೂಪ ಆಶ್ರಮವನ್ನು ನಾನು ನೋಡಿರುತ್ತೇನೆ. ಈ ಆಶ್ರಮದ ಒಟ್ಟು ಕ್ಷೇತ್ರ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಆಶ್ರಮದ ಪೂರ್ಣ ಕ್ಷೇತ್ರಕ್ಕೆ ಪ್ರತಿವಾದಿ ಕಾಪೌಂಡ್ ಹಾಕಿದ್ದಾರೆ ಎಂದರೆ ಸರಿ. ಈ ಆಶ್ರಮದಲ್ಲಿ ಚೌಡೇಶ್ವರಿ ದೇವಸ್ಥಾನ ಇತ್ತು ಎಂದು ಹೇಳಿ ಭಕ್ತರು ವ್ಯಾಜ್ಯ ಮಾಡಿದ್ದರು ಎಂದರೆ ಗೊತ್ತಿಲ್ಲ. ಪ್ರತಿವಾದಿ ಈ ಕುರಿತು ಅಸಲು ದಾವಾ ನಂಬರ್ 229/2014 ನ್ನು ಸಹ ದಾಖಲು ಮಾಡಿದ್ದರು ಎಂದರೆ ಗೊತ್ತಿಲ್ಲ. ಈ ವ್ಯಾಜ್ಯ ದಾಖಲು ಆದ ನಂತರ, ಊರಿನಲ್ಲಿ ಗಲಾಟೆ ಸಂಭವಿಸುವ ವಾತಾವರಣ ಇತ್ತು ಎಂದರೆ ಗೊತ್ತಿಲ್ಲ. ಇಂತಹ ವಾತಾವರಣ ಇದ್ದ ಕಾರಣ, ಪೋಲೀಸರು ಮತ್ತು ತಹಶೀಲ್ದಾರ್ ಇವರು ಗ್ರಾಮಕ್ಕೆ ಬಂದಿದ್ದರು ಎಂದರೆ ಗೊತ್ತಿಲ್ಲ. ಈ ವ್ಯಾಜ್ಯವನ್ನು ಸಮದಾನವಾಗಿ ಬಗೆಹರಿಸಲು ಪೋಲೀಸರು ಮತ್ತು ತಹಶೀಲ್ದಾರ್ ಪ್ರಯತ್ನಪಟ್ಟಿದ್ದರು ಎಂದರೆ ಗೊತ್ತಿಲ್ಲ.

ದಿನಾಂಕಃ11-11-2014 ರಂದು ಆಶ್ರಮದ ಬಳಿ ಒಂದು ಸಂದಾನ ಸಭೆಯನ್ನು ಏರ್ಪಡಿಸಿದ್ದರು ಎಂದರೆ ಗೊತ್ತಿಲ್ಲ. ಸಾಕ್ಷಿಗೆ ಒಂದು ದಿನಪತ್ರಿಕೆಯನ್ನು ತೋರಿಸಿ, ನನಗೆ ಸದರಿ ಸಭೆಯ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆಶ್ರಮದಲ್ಲಿ ಕ್ರಯದ ಕರಾರು ಪತ್ರ ಆಗಿರುತ್ತದೆ, ಬೆಳಿಗ್ಗೆ ಆಗಿರುತ್ತದೆ, ಪ್ರತಿವಾದಿಯೇ ಕರೆಯಿಸಿದ್ದರು. ಜಿ.ಆನಂದಪ್ಪ, ಚಿಲಕೂರಿನ ಗಂಗಾರಾಜಯ್ಯ, ಎನ್ ದೊರೈ, ಎನ್ ಆಧಿನಾರಾಯಣ, ವಿಲಾಸ್ ಲದ್ವಾ, ನಾನು ಮತ್ತು ಪ್ರತಿವಾದಿ ಇದ್ದೇವು. ನಾನು ಇಷ್ಟು ಜನ ಇದ್ದೇವು ಎಂದು ನನ್ನ ವಕೀಲರಿಗೆ ತಿಳಿಸಿಲ್ಲ. ಸಾಕ್ಷಿ ಅಂಗ್ರಿಮೆಂಟ್ ಕೊಟ್ಟಿದ್ದೆನು ಎಂದು ಹೇಳುತ್ತಾರೆ. ಪ್ರತಿವಾದಿ ಪಹಣಿ ತೋರಿಸಿದ

ನಂತರ ವ್ಯಾಪಾರ ಮಾಡಿದೆನು. ಪಹಣಿಯಲ್ಲಿ ಆಸ್ತಿ ಪ್ರತಿವಾದಿಗೆ ಯಾವ ರೀತಿ ಬಂದಿತ್ತು ಎಂದು ನಾನು ನೋಡಲಿಲ್ಲ, ಸಾಕ್ಷಿ ಪ್ರತಿವಾದಿ ನನ್ನ ಆಸ್ತಿ ಎಂದು ಹೇಳಿದನು, ನಂಬಿಕೆಯ ಮೇಲೆ ಖರೀದಿ ಮಾಡಿದೆನು ಎಂದು ಹೇಳುತ್ತಾರೆ. ಪಹಣಿಯನ್ನು ನನ್ನ ವಕೀಲರಿಗೆ ತೋರಿಸಿ ಅವರ ಸಲಹೆ ಪಡೆಯಲಿಲ್ಲ. ಪಹಣಿಯಲ್ಲಿ 11 ವರೆ ಗುಂಟೆ ಕ್ಷೇತ್ರ ಇತ್ತು. 11 ವರೆ ಗುಂಟೆಯಲ್ಲಿ 3 ವರೆ ಗುಂಟೆ ಕೊಡುತ್ತೇನೆ ಪ್ರತಿವಾದಿ ಹೇಳಿದರು. ನನಗೆ ಈ 3 ವರೆ ಗುಂಟೆ ಜಮೀನಿನ ಚಕ್‌ಬಂದಿ ಗೊತ್ತಿರುತ್ತದೆ. ಪೂರ್ವಕ್ಕೆ ತರನಹಳ್ಳಿ ಹಾಲೇಶಪ್ಪ, ಪಶ್ಚಿಮಕ್ಕೆ ಚಾನಲ್, ದಕ್ಷಿಣಕ್ಕೆ ವೆಂಕಟರಾವ್ ಈತನ ಜಮೀನು ಮತ್ತು ಉತ್ತರಕ್ಕೆ ಪ್ರತಿವಾದಿಯ ಉಳಿದ ಜಮೀನು ಇರುತ್ತದೆ. ಈ 3 ವರೆ ಗುಂಟೆಯಲ್ಲಿ ಒಂದು ರೂಂ ಮತ್ತು ಉಳಿದಿದ್ದು ಖುಲ್ಲಾ ಜಾಗ ಇರುತ್ತದೆ. ವಾದಪತ್ರದ ಶೆಡ್ಯೂಲ್ ನಲ್ಲಿ ಮತ್ತು ಕರಾರು ಪತ್ರದಲ್ಲಿ ಈ ಶೆಡ್ ಕುರಿತು ತಿಳಿಸಿದ್ದೀರಾ ಎಂದರೆ ಸಾಕ್ಷಿ ಅಂಗ್ರಿಮೆಂಟ್ ನಲ್ಲಿ ಇದೆ ಎಂದು ಹೇಳುತ್ತಾರೆ. ಶೆಡ್ ಮತ್ತು ತೆಂಗಿನ ಮರಗಳು ಇದ್ದ ಬಗ್ಗೆ ವಾದಪತ್ರದಲ್ಲಿ ಮತ್ತು ಕರಾರು ಪತ್ರದಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ.

3 ತಿಂಗಳೊಳಗೆ ಕ್ರಯಪತ್ರ ಮಾಡಿಕೊಳ್ಳಬೇಕು ಎಂಬ ಕರಾರು ಇತ್ತು. ಈ 3 ತಿಂಗಳ ಅವದಿಯಲ್ಲಿ ನಾನು ಪ್ರತಿವಾದಿಗೆ ಕ್ರಯಪತ್ರ ಮಾಡಿಕೊಡಿ ಎಂದು ಕೇಳಿದ್ದೆನು. ಬಾಯಿ ಮಾತಿನಲ್ಲಿ ಕೇಳಿದ್ದೆನು, ದಿನಾಂಕಃ04-03-2015 ರಂದು ಪ್ರತಿವಾದಿ ಉಪನೊಂದಣಾಧಿಕಾರಿಗಳ ಕಚೇರಿಗೆ ಬರಲು ಹೇಳಿದ್ದನು, ಅಲ್ಲಿಯೂ ಕಾಯ್ದೆನು ಆತ ಬರಲಿಲ್ಲ. ಮೌಖಿಕವಾಗಿ ಯಾವಾಗ ಕೇಳಿದ್ದೆನು ಎಂದು ದಿನಾಂಕ ನೆನಪಿಲ್ಲ. ದಿನಾಂಕಃ01-04-2015 ರಂದು ನನಗೆ 3 ನೇ ತಾರೀಖಿಗೆ ಬಾ ಎಂದು ಮೌಖಿಕವಾಗಿ ಹೇಳಿದ್ದರು. ನಾನು ರೂ.3 ಲಕ್ಷ 20 ಸಾವಿರ ತೆಗೆದುಕೊಂಡು ಉಪನೊಂದಣಾಧಿಕಾರಿಗಳ ಕಚೇರಿಗೆ ಹೋಗಿದ್ದೇನು. ಆ ದಿನ

ಉಪನೊಂದಣಾಧಿಕಾರಿಗಳ ಕಚೇರಿಗೆ ಹೋದ ಬಗ್ಗೆ ದಾಖಲೆ ಇಲ್ಲ ಆದರೆ ಒಂದು ದಾಖಲೆಗೆ ಆ ದಿನ ನಾನು ಸಾಕ್ಷಿದಾರ ಎಂದು ಸಹಿ ಮಾಡಿರುತ್ತೇನೆ. ಅದು ಏನು ದಾಖಲೆ ಎಂದು ಈಗ ನೆನಪಿಲ್ಲ. ಸದರಿ ನಾನು ಸಹಿ ಮಾಡಿದ ದಾಖಲೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ, ಬೇಕಾದರೆ ಹಾಜರುಪಡಿಸುತ್ತೇನೆ.

ನಾನು ಮತ್ತು ಚೌಡೇಶ್ವರಿ ದೇವಸ್ಥಾನ ಕಮಿಟಿಯವರು, ತಹಶೀಲ್ದಾರ್ ಮತ್ತು ಪೋಲೀಸರು ಸೇರಿ ಒತ್ತಡದ ಮೇರೆಗೆ ಪ್ರತಿವಾದಿಯ ಸಹಿಯನ್ನು ಪಡೆದಿದ್ದೇವೆ ಎಂದರೆ ಸರಿಯಲ್ಲ. ಈ ವಿಷಯ ಗೊತ್ತಾಗಿ ರೈತ ಸಂಘದವರು ಪ್ರತಿವಾದಿಗೆ ಅನ್ಯಾಯ ಆಗಿದೆ ಎಂದು ತಹಶೀಲ್ದಾರ್, ಶ್ರೀಮತಿ ನಜ್ಮಾ ಇವರ ಕಚೇರಿಯ ಮುಂದೆ ಧರಣಿ ಸಹ ಮಾಡಿದ್ದರು ಎಂದರೆ ಗೊತ್ತಿಲ್ಲ. ಈ ಧರಣಿ ಮಾಡಿದ ಬಗ್ಗೆ ತಹಶೀಲ್ದಾರ್ ರೈತ ಸಂಘದವರ ವಿರುದ್ದ ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದರು ಎಂದರೆ ಗೊತ್ತಿಲ್ಲ. ಈ ಎಲ್ಲಾ ಘಟನೆಗಳ ಬಗ್ಗೆ ದಿನಪತ್ರಿಕೆಯಲ್ಲಿ ಬಂದಿತ್ತು ಎಂದರೆ ಗೊತ್ತಿಲ್ಲ. ಈ ಘಟನೆಯ ನಂತರ, ದೇವಸ್ಥಾನದವರು ಪ್ರತಿವಾದಿಯ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ ಈ ಕುರಿತು ದೂರು ಕೊಟ್ಟಿದರು ಮತ್ತು ನಾನು ಸಹ ಒಬ್ಬ ಆರೋಪಿ ಎಂದರೆ ಸಾಕ್ಷಿ ಸುಳ್ಳು ದೂರು ಕೊಟ್ಟಿದ್ದರು ಎಂದು ಹೇಳುತ್ತಾರೆ. ಪ್ರತಿವಾದಿ ನನಗೆ ಯಾವುದೇ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನಿಂದ ಯಾವುದೇ ಮುಂಗಡ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಎಷ್ಟು ಜನ ಸಹೋದರ-ಸಹೋದರಿಯರು ಎಂದು ನನಗೆ ಗೊತ್ತಿಲ್ಲ, ಸಾಕ್ಷಿ ಪ್ರತಿವಾದಿ ಪಹಣಿ ನನ್ನ ಹೆಸರಿಗೆ ಇದ ಎಂದು ಹೇಳಿದ್ದನು ಎಂದು ಹೇಳುತ್ತಾರೆ. ಪ್ರತಿವಾದಿಯ ಸಹೋದರಿ ಈ ನ್ಯಾಯಾಲಯದಲ್ಲಿ ಅಸಲು ದಾವಾ ನಂಬರ್ 5/2015 ನ್ನು ಪಾಲು ವಿಭಾಗಕ್ಕೆ ದಾಖಲಿಸಿದ್ದಳು ಎಂದರೆ ಗೊತ್ತಿಲ್ಲ, ಸಾಕ್ಷಿ ನನಗೆ

ಕೊಟ್ಟ ನಂತರ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಆ ದಾವೆಯ ಬಗ್ಗೆ ನನಗೆ ಗೊತ್ತಾಗಿ ನಾನು ಸದರಿ ದಾವೆಯಲ್ಲಿ ನನ್ನ ವಕೀಲರ ಮುಖಾಂತರ ಹಾಜರಾಗಿ, ನನ್ನನ್ನು ಸಹ ಪಕ್ಷಗಾರ ಎಂದು ಮಾಡಲು ಅರ್ಜಿ ಹಾಕಿದ್ದೆನು ಎಂದರೆ ಗೊತ್ತಿಲ್ಲ. ಸದರಿ ದಾವೆ ಡಿಕ್ರಿಯಾಯಿತು ಎಂದರೆ ಗೊತ್ತಿಲ್ಲ.

ದೇವಸ್ಥಾನದ ಕಮೀಟಿಯವರ ಜೊತೆಗೆ ಶಾಮಿಲಾಗಿ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾಖಲೆ ಸೃಷ್ಠಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಆಶ್ರಮಕ್ಕೆ ಬಹಳ ಜನ ಭಕ್ತಾದಿಗಳು ಬರುತ್ತಾರೆ ಎಂದರೆ ನಾನು ನೋಡಿಲ್ಲ. ಪ್ರತಿವಾದಿಗೆ ಈ ಆಶ್ರಮದಿಂದ ಒಳ್ಳೆಯ ಆದಾಯ ಇದೆ ಎಂದರೆ ಗೊತ್ತಿಲ್ಲ. ಪ್ರತಿವಾದಿಗೆ ಈ 3 ವರೆ ಗುಂಟೆ ಮಾರುವ ಯಾವುದೇ ಅವಶ್ಯಕತೆ ಇರಲಿಲ್ಲ ಎಂದರೆ ಗೊತ್ತಿಲ್ಲ, ಸಾಕ್ಷಿ ಅವರೇ ಕರೆದು ವ್ಯಾಪಾರ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಪ್ರತಿವಾದಿಗೆ ದಾವಾ ಆಸ್ತಿಯ ಮೇಲೆ ಸಂಪೂರ್ಣ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.